# ರಾಮನೆಂಬ ಬಳ್ಳಿಯ ಅಪೂರ್ವ ಪುಷ್ಪಗಳು

## ಕಬೀರ ಮತ್ತು ದಾದು ದಯಾಳ್



**ಸಿ.ಎನ್. ರಾಮಚಂದ್ರನ್**

ರೇಖಾಚಿತ್ರಗಳು: ವೀರೇಶ ರುದ್ರಸ್ವಾಮಿ

‘ರಾಮಭಕ್ತ ಮುಸ್ಲಿಮ್ ಕವಿಗಳು’ ಮಾಲಿಕೆಯ ಮೂರನೇ ಹಾಗೂ ಕೊನೆಯ ಭಾಗ ಕಬೀರ್ ಮತ್ತು ದಾದು ದಯಾಳ್‌ರನ್ನು ಕುರಿತಾದುದು. ಈ ಇಬ್ಬರು ಸಂತ ಕವಿಗಳು ರಾಮಭಕ್ತಿಯ ಮೂಲಕ ‘ಬಹುತ್ವ ಭಾರತ’ದ ಜೀವಂತಿಕೆಗೆ ನೀಡಿದ ಮಹತ್ವದ ಕೊಡುಗೆ, ಈ ಕಾಲಕ್ಕೆ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತ.

ಉತ್ತರ ಭಾರತದಲ್ಲಿ 15ನೆಯ ಶತಮಾನದಿಂದ ಸರಿ ಸುಮಾರು ಎಲ್ಲಾ ಪ್ರಾಂತ್ಯಗಳಲ್ಲಿಯೂ ಭಕ್ತಿ ಚಳವಳಿಗಳು ಪ್ರಾರಂಭವಾದವು ಮತ್ತು ನೇಕಾರರು, ಕಮ್ಮಾರರು, ಕೃಷಿಕರು, ಇತ್ಯಾದಿ ವೃತ್ತಿ-ವಿಶಿಷ್ಟ ಜಾತಿಗಳನ್ನು ಬಹು ಸಂಖ್ಯೆಯಲ್ಲಿ ಆಕರ್ಷಿಸಿದವು. ಈ ಚಳವಳಿಗಳ ನಾಯಕರು, ಬಹುತೇಕ, ಜನಸಾಮಾನ್ಯರ ಮಧ್ಯದಿಂದ ಬಂದವರಾಗಿದ್ದರು. ಇವರಲ್ಲಿ ಮುಖ್ಯರಾದವರೆಂದರೆ: ಗುರು ನಾನಕ್ (ಪಂಜಾಬ್, 1469–1539), ರಾಮಾನಂದ್ (1400–1477), ಕಬೀರ್ (ಉತ್ತರ ಪ್ರದೇಶ, 1440–1518), ಚೈತನ್ಯ (ಬಂಗಾಳ, 1485–1533), ದಾದು (ರಾಜಾಸ್ಥಾನ, 1544–1603) ಇತ್ಯಾದಿ.

ಉತ್ತರ ಭಾರತದ ವೈಷ್ಣವ ಭಕ್ತಿ ಚಳವಳಿಗಳಲ್ಲಿ ಮುಖ್ಯವಾಗಿ ಎರಡು ಸಂಪ್ರದಾಯಗಳನ್ನು ಗುರುತಿಸಬಹುದು: ರಾಮನನ್ನು ದೇವರ ಅವತಾರವೆಂದು ಗುರುತಿಸುವ ಸಂಪ್ರದಾಯ; ಈ ಸಂಪ್ರದಾಯದಲ್ಲಿ ರಾಮಾನಂದ, ತುಳಸೀದಾಸ, ನಾಭದಾಸ, ದಾದೂ ಮತ್ತು ಚರಣದಾಸ ಬರುತ್ತಾರೆ. ಮುಂದೆ ‘ಭಕ್ತ ಕಬೀರ್’